ಹಿರಿಯ ಸಿವಿಲ್ ಜಡ್ಜ್‌ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ
ಚನ್ನಪಟ್ಟಣ.

**ಸಿ.ಸಿ. ಸಂಖ್ಯೆ: 493/2022**

ಚಾಸಾಃ 2 ಫ್ರಾಸಾಃ2

| | | |
|---|---|---|
| ಹೆಸರು | : | ದಾರತಿ ಪಾಪಣ್ಣ |
| ಗಂಡನ/ತಂದೆಯ ಹೆಸರು | : | ಕಾಡಯ್ಯ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ನಾಗವಾರ ಗ್ರಾಮ. |

ದಿನಾಂಕ **01.07.2025** ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ

ಚಾಸಾ-*1* ಮತ್ತು ಆರೋಪಿತರು ಗೊತ್ತು. ದಿಃ*03.04.2022* ರಂದು ನಮ್ಮ ಗ್ರಾಮದಲ್ಲಿರುವ ನಮ್ಮ ಗದ್ದೆಗೆ ಹೋಗಿದ್ದಾಗ, ನನ್ನ ಜೊತೆ ಚಾಸಾ*1* ರವರು ಸಹ ಬಂದಿದ್ದರು. ಆಗ ಸಮಯ *3.00* ಗಂಟೆಯಾಗಿತ್ತು. ಆಗ ಚಾಸಾ*1* ರವರು *1* ನೇ ಆರೋಪಿಯ ಬಳಿ ಕಾಸನ್ನು ಕೇಳಿರುತ್ತಾರೆ. ಆಗ *1* ನೇ ಆರೋಪಿಯು ಸಿಟ್ಟು ಮಾಡಿಕೊಂಡು ಹೊರಟು ಹೋದರು. ನಂತರ ವಾಪಸ್ಸು *1* ಮತ್ತು *2* ನೇ ಆರೋಪಿತರು ದೊಣ್ಣೆಗಳನ್ನು ಹಿಡಿದುಕೊಂಡು ಬಂದು ಚಾಸಾ-*1* ರವರನ್ನು ಉದ್ದೇಶಿಸಿ ನಿನ್ ಅಮ್ ನಾ*** ಎಂದು ಅವಾಚ್ಯ ಶಬ್ದದಿಂದ ಬೈದು, *1* ಮತ್ತು *2* ನೇ ಆರೋಪಿತರಿಬ್ಬರು ಚಾಸಾ*1* ರವರ ತಲೆಗೆ ಹೊಡೆದಿರುತ್ತಾರೆ. ನಾನು ಬಿಡಿಸಲು ಹೋಗಿರುತ್ತೇನೆ. ಆಗ ನನ್ನ ಮೇಲೂ ಸಹ ಆರೋಪಿತರು ರೇಗಾಡಿರುತ್ತಾರೆ. ನಂತರ ನಾನು ಚಾಸಾ*1* ರವರ ಅಣ್ಣ ತಮ್ಮಂದಿರಾದ ರಾಜುರವರಿಗೆ ದೂರವಾಣಿ ಕರೆ ಮಾಡಿ ವಿಚಾರ ತಿಳಿಸಿರುತ್ತೇನೆ. ಅವರು ಬಂದು ಚಾಸಾ*1* ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಈಗ ತೋರಿಸುತ್ತಿರುವ ಮಹಜರ್ ಮೇಲೆ ನನ್ನ ಸಹಿ ಇದೆ. ಸಾಕ್ಷಿಯು ಸದರಿ ಮಹಜರ್ ಮೇಲೆ ಇರುವ ಸಹಿಯನ್ನು ನೋಡಿ ಗುರುತಿಸಿದ್ದು

ಅದನ್ನು ನಾನು ಮನೆಯ ಹತ್ತಿರ ಮಾಡಿರುತ್ತೇನೆ. ಸದರಿ ಮಹಜರ್ ಅನ್ನು ನಿಪಿ-*2* ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-*2(ಎ)* ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಪೋಲಿಸರು ಗದ್ದೆಯ ಬಳಿಯಿಂದ ದೊಣ್ಣೆಗಳನ್ನು ತೆಗೆದುಕೊಂಡು ಹೋಗಿರುತ್ತಾರೆ. ಆರೋಪಿತರು ಹಲ್ಲೆಗೆ ಉಪಯೋಗಿಸಿದ ದೊಣ್ಣೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು ಮಾ *1* ಮತ್ತು *2* ಅನ್ನು ನೋಡಿ ಗುರುತಿಸುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಅನುಮತಿ ಕೋರಿದ್ದಾರೆ, ಅನುಮತಿಸಲಾಯಿತು).

<u>ಪಾಟೀ ಸವಾಲುಃ ಎಪಿಪಿಯವರಿಂದಃ</u>

ನಾನು ಜಗಳ ಬಿಡಿಸಲು ಹೋದಾಗ ಆರೋಪಿತರು ಇನ್ನೊಂದು ಬಾರಿ ಹಣ ಕೇಳಿದರೆ ನಿನ್ನ ಪ್ರಾಣವನ್ನು ತೆಗೆಯುತ್ತೇನೆಂದು ಚಾಸಾ1 ರವರಿಗೆ ಪ್ರಾಣ ಬೆದರಿಕೆ ಹಾಕಿರುತ್ತಾರೆಂದರೆ ಸರಿ. ಈಗ ತೋರಿಸಿದ ದಾಖಲೆಯ ಮೇಲೆ ಗದ್ದೆಯ ಬಳಿ ಮಹಜರ್ ಸಮಯದಲ್ಲಿ ಸಹಿ ಮಾಡಿರುತ್ತೇನೆಂದರೆ ಸರಿ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಟಿ ವಿ ಜಿ ವಕೀಲರಿಂದಃ</u>

ಚಾಸಾ2 ರಿಂದ 5 ರವರು ಚಾಸಾ-1 ರವರಿಗೆ ಅಣ್ಣ ತಮ್ಮಂದಿರು ಎಂದರೆ ನಿಜ. ಚಾಸಾ-1 ರವರ ಗದ್ದೆಯ ಪಕ್ಕ ನಮ್ಮ ಹೊಲ ಇಲ್ಲ. ಸಿಟ್ಟು ಮಾಡಿಕೊಂಡು ಹೋದ ನಂತರ ಆರೋಪಿತರು 1 ಗಂಟೆ ಬಿಟ್ಟು ಬಂದಿರುತ್ತಾರೆ. ಆಗ ಚಾಸಾ1 ರವರು ಮದ್ಯಪಾನ ಮಾಡಿದ್ದರು ಎಂದರೆ ಸುಳ್ಳು. ಚಾಸಾ-1 ರವರು ಮದ್ಯಪಾನ ಮಾಡಿದರು ಎಂದು ತಾನೇ ಸ್ವತಃ ಪೋಲಿಸರಿಗೆ ಹೇಳಿಕೆ ನೀಡಿರುತ್ತಾರೆಂದರೆ ಸುಳ್ಳು. ಘಟನೆಯ ಬಗ್ಗೆ ನಾನು ದೂರು ನೀಡಿಲ್ಲ. ಆರೋಪಿತರು ನನಗೂ ಸಹ ಕೈಯಿಂದ ಹೊಡೆದಿರುತ್ತಾರೆ. ಈ ಬಗ್ಗೆ ನಾನು ಚಿಕಿತ್ಸೆ ಪಡೆದಿಲ್ಲ. ಗಲಾಟೆ ನಡೆದ ಸ್ಥಳ ನಮಗೆ ಸೇರಿದ್ದು. ಈ ಬಗ್ಗೆ ದಾಖಲೆಯನ್ನು ಪೋಲಿಸರಿಗೆ ಕೊಟ್ಟಿರುತ್ತೇನೆ. ಮು ಮಾ 1

ಮತ್ತು 2 ರ ಮೇಲೆ ನನ್ನ ಸಹಿಗಳು ಇಲ್ಲ. ಘಟನೆ ನಡೆದ ಬಗ್ಗೆ ಯಾವುದೇ ಕುರುಹುಗಳು ಇಲ್ಲ ಎಂದು ನಾನು ಮಹಜರ್ ಗೆ ಸಹಿ ಮಾಡಿರುತ್ತೇನೆಂದರೆ ಸುಳ್ಳು. ನಾನು ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದರೆ ಸುಳ್ಳು. ಚಾಸಾ1 ರವರು ನನ್ನ ಅಣ್ಣ ತಮ್ಮಂದಿರಾಗಿದ್ದರಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು. ನಾನು ಘಟನಾ ಸ್ಥಳದಲ್ಲಿ ಇಲ್ಲದೇ ಇದ್ದುದ್ದರಿಂದ ಯಾವುದೇ ಹಲ್ಲೆಯಾಗಿಲ್ಲ ಎಂದರೆ ಸುಳ್ಳು. ಈ ಹಿಂದೆ ಚಾಸಾ1 ರವರು ಮದ್ಯಪಾನ ಮಾಡಿ ಗಲಾಟೆ ಮಾಡಿದ ಬಗ್ಗೆ ಆರೋಪಿತರು ದೂರು ನೀಡಿದ್ದರು ಎಂದರೆ ಗೊತ್ತಿಲ್ಲ. ನಾನು ಘಟನಾ ಸ್ಥಳದಲ್ಲಿ ಮಹಜರ್ ಗೆ ಸಹಿ ಮಾಡಿಲ್ಲ ಮನೆಯ ಬಳಿ ಮಾಡಿರುತ್ತೇನೆಂದರೆ ಸುಳ್ಳು.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.